➢ ಸಮೀಪದಲ್ಲಿರುವ ಅನುದಾನಿತ ಪದವಿ ಪೂರ್ವ ಕಾಲೇಜುಗಳು ಮತ್ತು ಅಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ.

ತೊಂದರೆಗಳು:-

ಕೋರುವ ಎಲ್ಲಾ ಸ್ಥಳಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಉಂಟಾಗಬಹುದು, ವಿದ್ಯಾರ್ಥಿಗಳು ದೊರಕದೇ ಇರಬಹುದು, ಸರ್ಕಾರಕ್ಕೆ ಸಂಪನ್ಮೂಲದ ಕೊರತೆ ಮತ್ತು ವ್ಯರ್ಥ ಆಗಬಹುದು.

ಹೊಸದಾಗಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವುದು

42(268) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್:(ಸೇಡಂ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010-11ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಸರ್ಕಾರದ ಹೊಸ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾನಿಲಯಗಳು ಪ್ರಾರಂಭಿಸಲು ಎಷ್ಟು ಹಣ ಒದಗಿಸಲಾಗಿದೆ;

ಆ) 2010-11ನೇ ಸಾಲಿನಲ್ಲಿ ಹೊಸ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾನಿಲಯಗಳು ಮಂಜೂರು ಮಾಡಲಾಗುತ್ತಿದೆಯೇ; ಮಂಜೂರು ಮಾಡಿದಲ್ಲಿ, ಯಾವ ಯಾವ ಸ್ಥಳದಲ್ಲಿ ಮಾಡಲಾಗುತ್ತಿದೆ (ವಿವರ ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) 2010-11ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಸರ್ಕಾರದ ಹೊಸ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಯಾವುದೆ ಅನುದಾನ ಒದಗಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಮದ್ಯಪಾನ ನಿರ್ಬಂಧ

43(122) ಶ್ರೀ ರಾಮಲಿಂಗಾ ರೆಡ್ಡಿ: (ಬಿ.ಟಿ.ಎಂ.ಲೇಔಟ್) ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ವೈನ್ ಶಾಪ್‌ಗಳು ಮತ್ತು ಪಬ್‌ಗಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಹದಿನಾರು ವರ್ಷದೊಳಗಿನ ಯುವ ಜನಾಂಗಕ್ಕೆ ಮದ್ಯಪಾನ ಮಾರಾಟವನ್ನು ನಿಷೇದಿಸಲಾಗಿದೆಯೇ;

ಇ) ಈ ಪಬ್‌ಗಳಲ್ಲಿ ರಾತ್ರಿ 2 ಗಂಟೆವರೆಗೆ ಮದ್ಯ ಸರಬರಾಜು ಮಾಡಲು ಸರ್ಕಾರ ಆದೇಸಿದೆಯೇ;

ಈ) ಇದರಿಂದ ಹಿಂದುಳಿದ ಜನಾಂಗದವರು ಮತ್ತು ದುರ್ಬಲ ವರ್ಗದವರ ಆರ್ಥಿಕ ಪರಿಸ್ಥಿತಿ ಮೇಲೆ ದುಷ್ಪರಿಣಾಮ ಬೀರುವುದರಿಂದ ಈ ಆದೇಶವನ್ನು ಸರ್ಕಾರ ಹಿಂತೆಗೆದುಕೊಳ್ಳುತ್ತದೆಯೇ?

ಶ್ರೀ ಎಂ ಪಿ ರೇಣುಕಾಚಾರ್ಯ(ಅಬಕಾರಿ ಸಚಿವರು):

ಅ) 2009–10ನೇ ಸಾಲಿಗೆ ರಾಜ್ಯದಲ್ಲಿ 3835 ವೈನ್ ಶಾಪ್‌ಗಳು ಮತ್ತು 203 ಪಬ್‌ಗಳಿಗೆ ಸನ್ನದು ಮಂಜೂರಾಗಿರುತ್ತದೆ.

ಆ) ಹೌದು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಕುರಿತು

44(274) ಶ್ರೀ ಎಂ ಟಿ ಕೃಷ್ಣಪ್ಪ:(ತುರುವೇಕೆರೆ)ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ತುರುವೇಕೆರೆ ಮತಕ್ಷೇತ್ರದ ಸಿ.ಎಸ್.ಪುರ ಹೋಬಳಿಯ ಗ್ರಾಮಗಳಿಗೆ ಸ್ಥಳೀಯ ಕೆರೆಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;